ಅಸಲು ದಾವಾ ನಂ.219/2017

ಪಿ.ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 29-03-2019

**ಪಾಟೀ ಸವಾಲುಃ-** ಶ್ರೀ ಕೆ.ಪಿ.ಎ ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತು . ಹಿಸ್ಸೆ ಕೋರಿ ದಾವಾ ದಾಖಲಿಸಿದ್ದೇನೆ. 7 ಎಕರೆ ಜಮೀನಿಗೆ ದಾವಾ ದಾಖಲಿಸಿದ್ದೇನೆ. ನಮ್ಮ ಒಟ್ಟು ಕುಟುಂಬದ ಬೇರೆ 25 ಗುಂಟೆ ಸ್ವತ್ತನ್ನು ಈ ಕೇಸಿಗೆ ಸೇರಿಸಿಲ್ಲ. ಅದು ನಮ್ಮ ತಾಯಿಯ ಹೆಸರಿನಲ್ಲಿರುವುದರಿಂದ ಈ ಕೇಸಿಗೆ ಸೇರಿಸಿಲ್ಲ. ಸೂರಮ್ಮ ಕೋಂ ಬೋರೇಗೌಡ ನನ್ನ ತಾಯಿ. ನನ್ನ ತಾಯಿಯ ಹೆಸರಿನಲ್ಲಿ ಸರ್ವೆ ನಂ.156 ರಲ್ಲಿ 1 ಎಕರೆ 28 ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂ.204 ರಲ್ಲಿ 3 ಎಕರೆ ಜಮೀನು ನನ್ನ ತಂದೆಯ ಹೆಸರಿನಲ್ಲಿದೆ. ಸರ್ವೆ ನಂ.204 ರಲ್ಲಿರುವ 3 ಎಕರೆ ಜಮೀನನ್ನು ನನ್ನ ತಂದೆ ಸಂಜೀವ ಶೆಟ್ಟರಿಂದ ಕೊಂಡಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ಈ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಈ ಸ್ವತ್ತನ್ನು ನೊಂದಾಯಿತ ದಾನಪತ್ರದ ಮೂಲಕ 1 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಹೋದರಿಯರ ಮದುವೆ ಮಾಡಿದ್ದರಿಂದ ಮತ್ತು ಅವರ ನಿಗಾವಣೆ ಮಾಡಿದ್ದರಿಂದ ಸರ್ವೆ ನಂ.204 ರ 3 ಎಕರೆ ಜಮೀನನ್ನು 1 ನೇ ಪ್ರತಿವಾದಿಗೆ ನೊಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಪ್ರತಿವಾದಿ ಬೇರೆ ವಾಸವಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ 10 ವರ್ಷಗಳಿಂದ ಬೇರೆ ವಾಸವಿದ್ದಾರೆ. 1 ನೇ ಪ್ರತಿವಾದಿ ಸರ್ವೆ ನಂ. 2/4 ರಲ್ಲಿ 3 ಎಕರೆ ಜಮೀನನ್ನು 10 ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ. 6 ನೇ ವಾದಿ ನಮ್ಮೂರಿನ ಸರ್ವೆ ನಂ.130 ರಲ್ಲಿ 3 ಅಂಗಡಿ ಮಳಿಗೆಯನ್ನು ಕಟ್ಟುತ್ತಿದ್ದಾರೆ. 6 ನೇ ವಾದಿ ಕಟ್ಟಿರುವ ಅಂಗಡಿ ಮಳಿಗೆಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. 6 ನೇ ವಾದಿ ಅಂಗಡಿ ಮಳಿಗೆಗಳನ್ನು ಒಟ್ಟು ಕುಟುಂಬದ ಪರವಾಗಿ ಎಲ್ಲರಿಗೂ ಕಟ್ಟುತ್ತಿದ್ದಾರೆ. ಸರ್ವೆ ನಂ.204 ರಲ್ಲಿ 3 ಎಕರೆ ಜಮೀನು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿದ್ದರಿಂದ 1 ನೇ ಪ್ರತಿವಾದಿಗೆ ನೊಂದಾಯಿತ ದಾನಪತ್ರದ ಮೂಲಕ ಹಕ್ಕು ಸ್ವಾಧೀನ ವರ್ಗಾವಣೆ ಮಾಡಿದ್ದು ಸರ್ವೆ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಮ್ಮ

ತಂದೆಯ ಸ್ವತ್ತುಗಳನ್ನು 1990 ನೇ ಸಾಲಿನಲ್ಲಿ ಬಾಯ್ಮಾತಿನ ಮೂಲಕ ಹಿಸ್ಸೆ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.204 ರಲ್ಲಿ 3 ಎಕರೆ ಜಮೀನನ್ನು ಹೊರತು ಪಡಿಸಿ 1 ನೇ ಪ್ರತಿವಾದಿಗೂ ಕುಟುಂಬದ ಎಲ್ಲಾ ಸ್ವತ್ತುಗಳಲ್ಲಿ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ